# ANTI POLLUTION DRIVE

APD FOUNDATION

ANTONY WASTE
HANDLING CELL PVT LTD

# IEC ವಾರ್ಷಿಕ ವರದಿ




## ಜೂನ್ 2016-17

# ಪರಿವಿಡಿ

ANTI POLLUTION DRIVE
APD FOUNDATION


1 ತೆರೆದ ಪತ್ರ

2 ಮುಖ್ಯಾಂಶಗಳು

3 ನಮ್ಮ ಬಗ್ಗೆ

5 ನಮ್ಮ ಆಂದೋಲನ

14 ಸಾಮಾಜಿಕ ಮಾಧ್ಯಮ ಅರಿವು

15 ಶ್ಲಾಘನೀಯ ಪರಿಸರ ದಿನ

16 ನಮ್ಮ ಪಾಲುದಾರರು

17 ವಾರ್ತಾಪತ್ರಿಕೆಯ ಲೇಖನಗಳು

18 ಸಂಪರ್ಕ ವಿವರಗಳು

# ತೆರೆದ ಪತ್ರ

ANTI POLLUTION DRIVE
APD FOUNDATION




ಮಂಗಳೂರು ನಗರದಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಆಂದೋಲನದ ವಾರ್ಷಿಕ ವರದಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಮಗೆ ಬಹಳ ಸಂತೋಷವಾಗುತ್ತಿದೆ. ಮಂಗಳೂರು ನಗರ ಮತ್ತು ಅದರ ಜನತೆಗೆ ಪರಿಸರ ಕಾಳಜಿಯ ಅರಿವಿನ ವಿಷಯದಲ್ಲಿ ಕಳೆದ ವರ್ಷ ಅತ್ಯಂತ ಚಟುವಟಿಕೆಗಳಿಂದ ಕೂಡಿದ ಮತ್ತು ಪ್ರಗತಿದಾಯಕವಾದ ವರ್ಷವಾಗಿತ್ತು. ಮಂಗಳೂರು ನಗರವು ಪರಿಸರದ ಸಂರಕ್ಷಣೆ ಕುರಿತಾದ ಪ್ಯಾನ್ ಸಿಟಿ ಜಾಗೃತಿಯ ಆಂದೋಲನವನ್ನು ಸಾಕ್ಷೀಕರಿಸಿತು.

ಈ ಆಂದೋಲನವು ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪೌರ ಕಾರ್ಮಿಕರು, ಮಾಧ್ಯಮದವರು, ರಾಜಕಾರಿಣಿಗಳು, ಆಡಳಿತ ವರ್ಗದವರು, ಸರ್ಕಾರಿ ಅಧಿಕಾರಿಗಳು, ಕಾರ್ಪೊರೇಟ್‌ಗಳು ಮತ್ತು ಇನ್ನೂ ಹಲವರಿಂದ ಕೂಡಿದ ವಿವಿಧ ಗುಂಪುಗಳು ಮತ್ತು ವಿಭಾಗಗಳ ಜನರ ಭಾಗವಹಿಸುವಿಕೆಯನ್ನು ಗಮನಿಸಿದೆ.

ನಾವು ನಿಮ್ಮೊಂದಿಗೆ ಹೊಸ ವರ್ಷಕ್ಕೆ ಮುನ್ನಡೆಯುತ್ತಿರುವ ಸಂದರ್ಭದಲ್ಲಿ, ನಾವು ನಮ್ಮ ಪ್ರಯತ್ನವು ಮಂಗಳೂರಿನಲ್ಲಿ ಸಾರ್ವಜನಿಕರಿಗೆ, ಪರಿಸರಕ್ಕೆ ಮತ್ತು ಆರ್ಥಿಕ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನವನ್ನು ನೀಡಲಿ ಎಂಬುದಷ್ಟೇ ನಮ್ಮ ಪ್ರಾರ್ಥನೆಯಾಗಿದೆ.

-

# ಮುಖ್ಯಾಂಶಗಳು

ANTI POLLUTION DRIVE
APD FOUNDATION

**15**
ಯೋಜನೆಗಳು

**45**
ಶಾಲೆಗಳು

**10,000**
ವಿದ್ಯಾರ್ಥಿಗಳು

**32**
ರೋಡ್ ಶೋಗಳು

**32**
ತಳಮಟ್ಟದ ಕ್ಯಾಂಪ್‌ಗಳು

**400**
ಆಟೋ ರಿಕ್ಷಾಗಳು

**27**
ಪ್ರಭಾವಿ ಕ್ಯಾಂಪ್‌ಗಳು

**20,000**
ಭಿತ್ತಿಪತ್ರಗಳು

UN-ಹ್ಯಾಬಿಟ್ಯಾಟ್ ಪ್ರಶಸ್ತಿ

# ನಮ್ಮ ಬಗ್ಗೆ

ಆಂಟಿ–ಪೊಲ್ಯೂಶನ್ ಡ್ರೈವ್ (ಎಪಿಡಿ) ಫೌಂಡೇಶನ್ ಒಂದು 1882ರ ಭಾರತದ ಟ್ರಸ್ಟ್‌ಗಳ ಕಾಯಿದೆಯ ಅಡಿಯಲ್ಲಿ ನೋಂದಾಯಿತಲಾಗಿರುವ ಒಂದು ಸಾರ್ವಜನಿಕ ಟ್ರಸ್ಟ್ ಆಗಿದೆ. ಈ ಲಾಭರಹಿತ ಫೌಂಡೇಶನ್, ವಾಹನಗಳ ವಾಯು ಮಾಲಿನ್ಯದ ಮೂಲವನ್ನು, ಪ್ರಮುಖವಾಗಿ ವಾಹನಗಳ ವಾಯು ಮಾಲಿನ್ಯ ಮತ್ತು ಸಮರ್ಪಕವಾದ ತ್ಯಾಜ್ಯ ನಿರ್ವಹಣೆ ಮೂಲಕ ನಿಯಂತ್ರಣದಲ್ಲಿಡಲು ಗಮನ ಕೇಂದ್ರೀಕರಿಸಿದೆ.

ನಾವು ಏನು ಮಾಡುತ್ತೇವೆ: ಈ ಆಂಟಿ–ಪೊಲ್ಯೂಶನ್ ಡ್ರೈವ್ (ಎಪಿಡಿ) ಫೌಂಡೇಶನ್ ಅನ್ನು ನಮ್ಮ ದೇಶದಲ್ಲಿ ಪ್ರಮುಖವಾದ ಎರಡು ಸಮಸ್ಯೆಗಳ ಬಗ್ಗೆ ಜನರಿಗೆ ಸಮರ್ಪಕವಾದ ಮಾಹಿತಿ ಮತ್ತು ಡೇಟಾ ಲಭ್ಯವಿಲ್ಲದ ಉದ್ದೇಶದಿಂದ ಸ್ಥಾಪನೆ ಮಾಡಲಾಗಿದೆ. ನಿಖರವಾದ ಮಾಹಿತಿ, ಡೇಟಾ ಹಂಚಿಕೆ ಮತ್ತು ನ್ಯಾಯಯುತವಾದ ಆಂದೋಲನದ ಮೂಲಕ ನಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವುದು ನಮ ಹೆಗ್ಗುರಿಯಾಗಿದೆ, ಹೀಗೆ ನಾವು ಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ನಮ್ಮ ಜನರಲ್ಲಿ ಅರಿವನ್ನು ಮೂಡಿಸುವುದು ಮತ್ತು ಸ್ಥಿರತೆಯ ಮತ್ತು ಜವಾಬ್ದಾರಿಯುತ ಜೀವನದಲ್ಲಿ ಹೆಚ್ಚು ಬದ್ಧತೆಯ ಪಾತ್ರವನ್ನು ನಾಗರಿಕರಲ್ಲಿ ಮೂಡಿಸುವುದು ನಮ್ಮ ಸಂಕಲ್ಪವಾಗಿದೆ.





ಗುರಿ: ವಾಯು ಮಾಲಿನ್ಯವನ್ನು ತಡೆಯುವುದು, ಪರಿಸರ ನೈರ್ಮಲೀಕರಣ ಸೌಲಭ್ಯವನ್ನು ಕಲ್ಪಿಸುವತ್ತ ಕೆಲಸ ಮಾಡುವುದು ಮತ್ತು ಇದರ ಮೂಲಕ ಸಾರ್ವಜನಿಕ ಆರೋಗ್ಯ ಮತ್ತು ಭಾರತದ ನಗರಗಳ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಸಹಾಯ ಮಾಡುವುದಾಗಿದೆ.

ದೃಷ್ಟಿಕೋನ: ಒಂದು ಸ್ವಚ್ಛ ಮತ್ತು ಆರೋಗ್ಯಕರ ಪರಿಸರ



# ನಮ್ಮ ಬಗ್ಗೆ

**ಸಮಸ್ಯೆ:**

ಮಂಗಳೂರು ಪ್ರತಿ ದಿನ ಸುಮಾರು 300 ಟನ್‌ಗಳಿಗೂ ಹೆಚ್ಚು ತ್ಯಾಜ್ಯವನ್ನು ಉತ್ಪಾದನೆ ಮಾಡುತ್ತಿದೆ ಅದರಲ್ಲಿ ಬಹುತೇಕ 85% ಸಂಗ್ರಹಿಸಲಾದ ತ್ಯಾಜ್ಯವನ್ನು ಭೂಮಿಯಲ್ಲಿ ಹೂತು ಹಾಕಲಾಗುತ್ತದೆ. ಹೀಗೆ ತಾಂತ್ರಿಕವಾಗಿ ಮಂಗಳೂರಿನಲ್ಲಿ 10,950 ಟ್ರಕ್‌ಗಳಷ್ಟು ತ್ಯಾಜ್ಯವನ್ನು ಭೂಮಿಯಲ್ಲಿ ಹೂತು ಹಾಕಲಾಗುತ್ತದೆ ಮತ್ತು ಪ್ರತಿವರ್ಷ 76,411 ಮೆಟ್ರಿಕ್ ಟನ್‌ಗಳಷ್ಟು $CO_2$ ಅನ್ನು ಉಗುಳುತ್ತವೆ – ಇದು 81,250,008 ಪೌಂಡ್‌ಗಳಷ್ಟು ಕಲ್ಲಿದ್ದಲನ್ನು ಸುಡುವುದಕ್ಕೆ ಸಮಾನವಾಗಿರುತ್ತದೆ.







ಇವೆಲ್ಲವೂ ಕೆಲವು ಸುತ್ತಿನ ಮಾತುಕತೆಗಳ ನಂತರ ಮತ್ತು ಎಪಿಡಿ **(APD)** ನಡೆಸಿದ ಯೋಜನೆಗಳ ಬಗ್ಗೆ ಎಡಬ್ಲ್ಯೂಎಚ್‌ಸಿಪಿಎಲ್ **(AWHCPL)** ತಂಡಕ್ಕೆ ಪರಿಚಯಿಸುವ ಮೂಲಕ ಪ್ರಾರಂಭಿಸಲಾಯಿತು. ಪರಿಸರಕ್ಕೆ ಸಂಬಂಧಿಸಿದ ನಮ್ಮ ಗುರಿಗಳು ಮತ್ತು ಉದ್ದೇಶಗಳು ಪರಸ್ಪರ ಪೂರಕ ಕೊಂಡಿಗಳಾಗಿವೆ ಮತ್ತು ನಮ್ಮ ಕೈಗಳನ್ನು ಜೋಡಿಸಿದಾಗ ಖಂಡಿತವಾಗಿಯೂ ಮಂಗಳೂರಿಗೆ ಮತ್ತು ಅದರ ನಾಗರಿಕರಿಗೆ ಪ್ರಯೋಜನಕಾರಿಯಾಗುತ್ತದೆ ಎಂಬುದನ್ನು ಇಬ್ಬರೂ ಅರ್ಥಮಾಡಿಕೊಂಡರು ನಂತರ ಇದೇ ನಮ್ಮ ಆಂದೋಲನಕ್ಕೆ ಚಾಲನೆ ನೀಡಿತು.



# ನಮ್ಮ ಆಂದೋಲನ

## ಹ್ಯಾಶ್ ಟ್ಯಾಗ್ ಆಂದೋಲನದ ಪರಿಚಯ:



### #ಮಿಕ್ಸ್‌ಮಲ್ಪೊಡ್ಚಿಅಕ್ಕ
### #ಮಿಕ್ಸ್‌ಮಾಡ್ಬೇಡಿ ಅಣ್ಣ

ಇದೊಂದು ತೀರಾ ಪ್ರಚಾರ ಗಿಟ್ಟಿಸಿಕೊಂಡ ಹ್ಯಾಶ್‌ಟ್ಯಾಗ್ ಆಗಿದ್ದು ನಾವು ಇದನ್ನು ಐಇಸಿ ಆಂದೋಲನವನ್ನು ಪ್ರಾರಂಭಿಸಿದಾಗ ಪರಿಚಯ ಮಾಡಿದೆವು. ಈ ಟ್ಯಾಗ್ ಒಂದು ಮುಖ್ಯಾಂಶವಾಗಿದೆ ಮತ್ತು ಇದನ್ನು ಹಲವಾರು ಮಧ್ಯಸ್ಥರು, ಸೆಲೆಬ್ರಿಟಿಗಳು, ಸಾರ್ವಜನಿಕ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ನಾಗರಿಕರು ಮುಂದೆ ಬಂದು ಈ ಹ್ಯಾಶ್ ಟ್ಯಾಗ್ ಅನ್ನು ಸಾರ್ವಜನಿಕವಾಗಿ ದಾಖಲಿಸುತ್ತಾರೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡುತ್ತಾರೆ.




## ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳು:







ನಮ್ಮ ತಂಡವು ರೋಡ್ ಶೋಗಳನ್ನು ಮಾಡಲು ಒಂದು ನಿರ್ದಿಷ್ಟ ವಾರ್ಡ್ ಪ್ರಕಾರ ಭೇಟಿ ಮಾಡಿತು ಮತ್ತು ಲೌಡ್ ಸ್ಪೀಕರ್‌ನಲ್ಲಿ ಪ್ರಚಾರ ಮಾಡುವ ಮೂಲಕ ಸುತ್ತಲೂ ಇರುವ ಸಾರ್ವಜನಿಕರನ್ನು ಉತ್ತೇಜಿಸಲಾಯಿತು. ಇದು ಅವರಿಗೆ ತ್ಯಾಜ್ಯವನ್ನು ವಿಂಗಡಿಸಲು ಮತ್ತು ಪರಿಸರ ಸಂರಕ್ಷಣೆಯ ಮಹತ್ವವನ್ನು ಅರ್ಥಮಾಡಿಸುವುದರ ಜೊತೆಗೆ ಅರಿವನ್ನು ನೀಡುತ್ತದೆ. ಶಾಲೆಯ ವಿದ್ಯಾರ್ಥಿಗಳು ಮತ್ತು ವಾರ್ಡ್ ಪ್ರದೇಶದ ಪೌರ ಕಾರ್ಮಿಕರು ಕೂಡ ಈ ಜನಪ್ರಿಯ ಕಾರ್ಯಕ್ರಮದಲ್ಲಿ ಕೈಜೋಡಿಸಿದರು. ಈ ಯೋಜನೆಯನ್ನು ರಸ್ತೆಯಲ್ಲಿರುವ ವ್ಯಾಪಾರಿಗಳನ್ನು, ಅಂಗಡಿ ಮಾಲೀಕರನ್ನು ಅದರಂತೆ ಆ ಪ್ರದೇಶದಲ್ಲಿ ಓಡಾಡುವ ದಾರಿಹೋಕರನ್ನು ಗುರಿಯಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿತ್ತು. ಹೀಗೆ ಈ ಯೋಜನೆಯ ಮೂಲಕ ನಮ್ಮೊಂದಿಗೆ ಚರ್ಚಿಸಲು ಮತ್ತು ನಮ್ಮ ಈ ಆರಂಭವನ್ನು ಬೆಂಬಲಿಸಲು ನಾಗರಿಕರಿಂದ ಹಲವಾರು ರೀತಿಯ ಸಹಕಾರವನ್ನು ನಾವು ಪಡೆದುಕೊಂಡಿದ್ದೇವೆ.







# ನಮ್ಮ ಆಂದೋಲನ



## ಭವಿಷ್ಯವನ್ನು ಶಿಕ್ಷಿತಗೊಳಿಸುವುದು:



ಪ್ರತಿಯೊಂದು ಕಾಲೇಜು ಮತ್ತು ಶಾಲೆಯು ನಮ್ಮ ಭವಿಷ್ಯವನ್ನು ಬದಲಾಯಿಸುವ ನೂರಾರು ವ್ಯಕ್ತಿಗಳ ತಾಣವಾಗಿದೆ. ನಾವು ಇಂತಹ ಶಿಕ್ಷಣ ಸಂಸ್ಥೆಗಳನ್ನು ತಲುಪುವ ಮೂಲಕ ತ್ಯಾಜ್ಯವನ್ನು ವಿಂಗಡಿಸುವ ಮಹತ್ವವನ್ನು ಮತ್ತು ಪರಿಸರ ಸಂರಕ್ಷಣೆಯ ಮಹತ್ವವನ್ನು ಯುವ ಮನಸ್ಸುಗಳಲ್ಲಿ ಮೂಡಿಸುವ ಮತ್ತು ಅವುಗಳನ್ನು ಅವರಲ್ಲಿ ಅಚ್ಚೊತ್ತುವ ಕುರಿತು ಆಶಿಸುತ್ತೇವೆ. ಈ ಆಂದೋಲನವು ನಮಗಾಗಿ ಅತ್ಯಂತ ಮಹತ್ವದ ವಹಿಸಿದೆ ಮತ್ತು ನಾವು ಪ್ರತಿಯೊಂದು ಶಾಲೆ ಅಥವಾ ಕಾಲೇಜಿನಲ್ಲಿ ಸಮಗ್ರತೆಯೊಂದಿಗೆ ಪ್ರವೇಶವನ್ನು ಮಾಡುತ್ತೇವೆ.

## ಹೋರ್ಡಿಂಗ್‌ಗಳು: ಶಾಶ್ವತ ಮಾಹಿತಿಯ ನ್ನು ಪ್ರಸ್ತಾಪಿಸುವುದು (ಸರ್ಕಾರಿ/ಸಾರ್ವಜನಿಕ ಕಟ್ಟಡಗಳು)



ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳು ಅತ್ಯಂತ ಜನ ನಿಬಿಡ ಪ್ರದೇಶಗಳಾಗಿದ್ದು, ಹೆಚ್ಚಿನ ನಾಗರಿಕರು ತಮ್ಮ ಅಗತ್ಯಗಳಿಗಾಗಿ ಇಲ್ಲಿಗೆ ಭೇಟಿ ನೀಡುತ್ತಾರೆ. ನಾವು ಇಂತಹ ಮೌಲ್ಯಯುತ ಪ್ರದೇಶಗಳಿಗೆ ಭೇಟಿ ಮಾಡಲು ಮತ್ತು ನಮ್ಮ ತ್ಯಾಜ್ಯ ವಿಂಗಡನೆಯನ್ನು ವಿವರವಾಗಿ ಅರ್ಥೈಸುವ ನಮ್ಮ ಮಾಹಿತಿಯ ಭಿತ್ತಿ ಫಲಕಗಳನ್ನು ಹಾಕಲು ನಿರ್ಧಾರ ಮಾಡಿದೆವು. ನಾವು ಹಲವು ಸರ್ಕಾರಿ ವಿಭಾಗಗಳ ಮುಖ್ಯಸ್ಥರನ್ನು ಭೇಟಿ ಮಾಡಿದೆವು ಮತ್ತು ಸಾರ್ವಜನಿಕರು ವೀಕ್ಷಿಸುವಂತೆ ಅವರ ಪರಿಮಿತಿಯಲ್ಲಿ ತರ್ಕಬದ್ಧ ರೀತಿಯಲ್ಲಿ ಫಲಕಗಳನ್ನು ನಿಲ್ಲಿಸುವ ಬಗ್ಗೆ ಅರ್ಥಮಾಡಿಸುವಲ್ಲಿ ಯಶಸ್ವಿಯಾದೆವು.



# ನಮ್ಮ ಆಂದೋಲನ

ANTI POLLUTION DRIVE
APD FOUNDATION

## ನೈಪುಣ್ಯತೆಯ ಸ್ಟಿಕ್ಕರ್ ಆಂದೋಲನ:





ಈ ಯೋಜನೆಯನ್ನು ತ್ಯಾಜ್ಯದ ವಿಂಗಡನೆಯ ಮಹತ್ವದ ಬಗ್ಗೆ ದೃಶ್ಯಾತ್ಮಕ ಪ್ರಭಾವವನ್ನು ರಚಿಸಲು ಮತ್ತು ಪೌರ ಕಾರ್ಮಿಕರನ್ನು ಬೆಂಬಲಿಸಲು ಆರಂಭಿಸಲಾಗಿದೆ. ನಗರದಾದ್ಯಂತ ಹಲವಾರು ಸ್ಥಳಗಳಲ್ಲಿ ಸುಮಾರು 10,000 ಸ್ಟಿಕ್ಕರ್‌ಗಳನ್ನು ರವಾನಿಸಲಾಗಿದೆ ಮತ್ತು ಅಂಟಿಸಲಾಗಿದೆ ಇದನ್ನು ನಾಗರಿಕರು ಗಮನಿಸುತ್ತಾರೆ. ಇಂತಹ ಚಿತ್ರಗಳುಳ್ಳ ಸ್ಟಿಕ್ಕರ್‌ಗಳು ಒಂದು ನಿರ್ಧಿಷ್ಟವಾದ ಪ್ರಭಾವಶಾಲಿ ಸಂದೇಶವನ್ನು ಒಯ್ಯುತ್ತವೆ ಇವು ಓದುಗರಿಗೆ ಮೂಲದಲ್ಲಿಯೇ ತ್ಯಾಜ್ಯವನ್ನು ವಿಂಗಡಿಸುವಂತೆ ಉತ್ತೇಜನವನ್ನು ನೀಡುತ್ತದೆ.





## ಸ್ವತಃ ಮಾಹಿತಿ ತಲುಪಿಸುವಿಕೆ:









ನಾವು ವಿಭಿನ್ನ ಐಇಸಿ ಚಟುವಟಿಕೆಗಳನ್ನು ನಗರದಾದ್ಯಂತ ಮಾಡುವಾಗ ನಮ್ಮ ತಂಡವು ನಾಗರಿಕರಿಗೆ ಹಂಚಲು ಕಲೆಯಲ್ಲಿ ಪರಿಣಿತರಾದ ನುರಿತರಿಂದ ವಿನ್ಯಾಸಗೊಳಿಸಲಾದ ಭಿತ್ತಿಪತ್ರಗಳನ್ನು ಮತ್ತು ಕರಪತ್ರಗಳನ್ನು ವಿನ್ಯಾಸಗೊಳಿಸಿದ್ದೇವೆ. ಪ್ರತಿಯೊಂದು ಬ್ಯಾಚ್‌ನ ಭಿತ್ತಿಪತ್ರವು ವಿಭಿನ್ನವಾದ ವಿನ್ಯಾಸದ ಕೋಡ್ ಹೊಂದಿದೆ ಮತ್ತು ಅದ್ವಿತೀಯ ವಿನ್ಯಾಸದಲ್ಲಿ ಮಾಹಿತಿಯನ್ನು ಮುದ್ರಿಸಲಾಗಿದೆ.



# ನಮ್ಮ ಆಂದೋಲನ

ANTI POLLUTION DRIVE
APD FOUNDATION

## ಪ್ಲೇಕಾರ್ಡ್‌ಗಳು: ಪ್ರತ್ಯಕ್ಷ ಜ್ಞಾನದ ರಚನೆ







ಕೆಲವು ಕಾರ್ಪೊರೇಟ್‌ಗಳು ಹೇಗೆ ತಮ್ಮ ಬ್ರಾಂಡ್ ಅನ್ನು ಅವರ ಪ್ಲೇ ಕಾರ್ಡ್ ಮೂಲಕ ಪ್ರಚುರಪಡಿಸಲು ನಗರದಾದ್ಯಂತ ಇರುವ ವಿದ್ಯುತ್ ಮತ್ತು ದೂರವಾಣಿ ಕಂಬಗಳು ಅಥವಾ ಮರಗಳು ಮತ್ತು ಗೇಟ್‌ಗಳ ಮೇಲೆ ಅವುಗಳನ್ನು ಅಂಟಿಸುತ್ತಾರೆಯೋ ಹಾಗೆಯೇ ನಾವೂ ಕೂಡ ಪರಿಸರ ಸಂರಕ್ಷಣೆಯ ಮಹತ್ವದ ಸಂದೇಶವನ್ನು ಹಂಚಲು ಇದೇ ತಂತ್ರವನ್ನು ಉಪಯೋಗಿಸಿಕೊಂಡಿದ್ದೇವೆ. ಆದಾಗ್ಯೂ ಸಣ್ಣ ಮಟ್ಟದಲ್ಲಿ ನಾವು ನಗರದ ಹಲವಾರು ಪ್ರದೇಶಗಳಲ್ಲಿ ಪ್ಲೇಕಾರ್ಡ್‌ಗಳನ್ನು ಅಂಟಿಸಿದ್ದೇವೆ.







## ತರಬೇತುದಾರರಿಗೆ ತರಬೇತಿ:













ಸಮರ್ಪಕವಾದ ಘನ ತ್ಯಾಜ್ಯ ನಿರ್ವಹಣೆಯನ್ನು ಸಾಧಿಸುವ ನಿಟ್ಟಿನಲ್ಲಿ, ತ್ಯಾಜ್ಯ ನಿರ್ವಾಹಕರು, ಪಿಕೆಗಳು ಮತ್ತು ಮೇಲ್ವಿಚಾರಕರನ್ನು ತರಬೇತಿಗೊಳಿಸುವ ವಿಚಾರವು ಅತ್ಯಂತ ಪ್ರಮುಖವಾಗಿದೆ. ಪಿಕೆಗಳು ಸಮರ್ಪಕವಾಗಿ ಮತ್ತು ಆಳವಾಗಿ ತರಬೇತಿಯನ್ನು ಪಡೆದರೆ ವಿಂಗಡಣೆಯಲ್ಲಿ ಯಶಸ್ಸನ್ನು ಸಾಧಿಸುವುದು ಅತ್ಯಂತ ಸುಲಭ ಸಾಧ್ಯವಾಗುತ್ತದೆ.ಈ ಕಾರ್ಯಾಗಾರದ ಅವಧಿಯಲ್ಲಿ ನಮ್ಮ ತ್ಯಾಜ್ಯ ನಿರ್ವಾಹಕರು ಘನ ಮತ್ತು ದ್ರವ ತ್ಯಾಜ್ಯಗಳ ಬಗ್ಗೆ, ವಿಂಗಡಣೆಯ ಮಹತ್ವವೇನು ಮತ್ತು ಪರಿಸರ ಮತ್ತು ಸಾರ್ವಜನಿಕ ಸ್ವಾಸ್ಥ್ಯದ ಕೊರತೆಗೆ ಎಷ್ಟರಮಟ್ಟಿಗೆ ಇದು ಪಾತ್ರವಹಿಸುತ್ತದೆ ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತದೆ. ಸಮರ್ಪಕವಾದ ಘನ ತ್ಯಾಜ್ಯ ನಿರ್ವಹಣೆ ಕಡ್ಡಾಯಗೊಳಿಸಲು ಕಾರಣಗಳೇನು ಎಂದು ಅವರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ ಮತ್ತು ಅವರು ನಮ್ಮ ಮೂಲ ಸೈನಿಕರಾಗಿ ಬದಲಾಗುತ್ತಾರೆ ಅವರು ತ್ಯಾಜ್ಯವನ್ನು ವಿಂಗಡಿಸುವುದು ಹೇಗೆ ಎಂಬುದನ್ನು ನಾಗರಿಕರಿಗೆ ಅರಿವನ್ನು ಮೂಡಿಸುವ ಕೆಲಸವನ್ನು ಮಾಡುತ್ತಾರೆ.

# ನಮ್ಮ ಆಂದೋಲನ

ANTI POLLUTION DRIVE
APD FOUNDATION

## NICO ಬ್ರಿಗೇಡ್







ನಾವು NICO ಬ್ರಿಗೇಡ್‌ನೊಂದಿಗೆ ಒಂದು ತಿಂಗಳಷ್ಟು ದೀರ್ಘಾವಧಿಯ ಆಂದೋಲನದ ಭಾಗವಾಗಿದ್ದೆವು ಈ ತಂಡವು NITTE ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್ (NICO) ಯಿಂದ ವಿದ್ಯಾರ್ಥಿಗಳನ್ನು ಒಳಗೊಂಡಿದ್ದು, ತ್ಯಾಜ್ಯ ವಿಂಗಡಣೆಯ ಕುರಿತಾದ ಆಂದೋಲನವನ್ನು ಸಂಘಟಿಸಲಾಯಿತು. ಪರಿಸರ ಮತ್ತು ಮಾಧ್ಯಮದ ತರಗತಿಯ ಭಾಗವಾಗಿ NICOದ ಮೊದಲನೆ ಸೆಮಿಸ್ಟರ್‌ನ ವಿದ್ಯಾರ್ಥಿಗಳು 26ನೇ ಅಕ್ಟೋಬರ್ ನಿಂದ 25ನೇ ನವಂಬರ್ ವರೆಗೆ ಒಂದು ತಿಂಗಳು ಅವಧಿಯ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿದರು. ಒಂದು ಆಸಕ್ತಿದಾಯಕವಾದ ಕಾರ್ಯಕ್ರಮದಲ್ಲಿ ಒಂದು ಚಿಕ್ಕ ಭಾಷಣ, ಕಾವ್ಯಾತ್ಮಕ ನಾಟಕ, ಹಾಸ್ಯ ನಾಟಕ ಮತ್ತು ಸಕ್ರಿಯಗೊಳಿಸುವ ಆಟಗಳನ್ನು ಆಡಿಸುವ ಮೂಲಕ ಎಲ್ಲಾ ವೀಕ್ಷಕರನ್ನು ಮತ್ತು ಭಾಗವಹಿಸುವವರನ್ನು ತ್ಯಾಜ್ಯ ವಿಂಗಡಣೆಯ ಮೂಲಗಳ ಬಗ್ಗೆ ಶಿಕ್ಷಿತರನ್ನಾಗಿ ಮಾಡಲಾಯಿತು. ಇದರಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ಎರಡರಲ್ಲಿಯೂ ಪೋಸ್ಟರ್ ಮಾಡುವ ಸ್ಪರ್ಧೆಯನ್ನು ಸಹ ಹಮ್ಮಿಕೊಳ್ಳಲಾಗಿತ್ತು, ಇದು ಎಲ್ಲರಿಗೂ ಮುಕ್ತವಾಗಿದ್ದು, ಇದರ ಗುರಿ ತ್ಯಾಜ್ಯ ವಿಂಗಡಣೆಯ ಪರಿಕಲ್ಪನೆಯಲ್ಲಿ ಅತ್ಯುತ್ತಮವಾದ ರಚನಾತ್ಮಕ ಪೋಸ್ಟರ್‌ಗೆ ಪ್ರಶಸ್ತಿಯನ್ನು ನೀಡುವ ಗುರಿಯನ್ನು ಹೊಂದಲಾಗಿತ್ತು.

## ಮಾಲ್‌ಗಳನ್ನು ಸಕ್ರಿಯಗೊಳಿಸುವಿಕೆ

ಮಾಲ್‌ಗಳು ಗರಿಷ್ಟ ಪ್ರಮಾಣದ ಪಾದಚಾರಿಗಳು ಓಡಾಡುವಂತಹ ಜನನಿಬಿಡ ಪ್ರದೇಶಗಳಾಗಿವೆ ಮತ್ತು ನಗರದಲ್ಲಿ ಇಂತಹ ಅತೀ ಹೆಚ್ಚು ಜನಪ್ರಿಯತೆಯುಳ್ಳ ಮತ್ತು ಹೆಚ್ಚು ಜನರು ಸಂದರ್ಶಿಸುವ ಮೂರು ಮಾಲ್‌ಗಳಿವೆ. ಕೆಎಸ್ ರಾವ್ ರಸ್ತೆಯಲ್ಲಿ ಇರುವ ಸಿಟಿ ಸೆಂಟರ್, ಪಾಂಡೇಶ್ವರದಲ್ಲಿ ಇರುವ ಪ್ರೆಸ್ಟೀಜ್ ಫಿಝಾ ಫೋರಮ್ ಮಾಲ್ ಮತ್ತು ಬಿಜೈನಲ್ಲಿ ಇರುವ ಭಾರತ್ ಮಾಲ್ ಆಗಿವೆ. ಸಿಟಿ ಸೆಂಟರ್ ಮಾಲ್ ನಮ್ಮ ತ್ಯಾಜ್ಯ ವಿಲೇವಾರಿ ಆಂದೋಲನಕ್ಕೆ ಬೆಂಬಲವನ್ನು ಸೂಚಿಸಿತು ಅವರು ತಮ್ಮಲ್ಲಿಗೆ ಪ್ರತಿ ದಿನ ಬರುವ 5000ಕ್ಕೂ ಹೆಚ್ಚಿನ ಸಂದರ್ಶಕರಿಗೆ ಒಟ್ಟಾರೆಯಾದ ಮತ್ತು ಮಾಹಿತಿಯಿಂದ ಕೂಡಿದ ತರಬೇತಿಯನ್ನು ನೀಡಲು ನಮ್ಮ ತಂಡಕ್ಕೆ ಅಗತ್ಯವಿರುವ ಅನುಮತಿಯನ್ನು ದೊರಕಿಸಿಕೊಟ್ಟರು. ನಾವು ಈ ಕೆಳಕಂಡ ಕಾರ್ಯನೀತಿಗಳನ್ನು ಪ್ರಾರಂಭಿಸಿದೆವು:– 1. ಫುಡ್ ಕೋರ್ಟ್ ಟಿವಿ ಸ್ಕ್ರೀನ್‌ನಲ್ಲಿ ವಿಡಿಯೋ ಪ್ರೆಸೆಂಟೇಶನ್, 2. ಮಾಲ್ ಪ್ರವೇಶದಲ್ಲಿ ಭಿತ್ತಿ ಪತ್ರಗಳ ವಿತರಣೆ 3. ಕಾರ್ ಪಾರ್ಕಿಂಗ್ ಪ್ರವೇಶದಲ್ಲಿ ತರಬೇತುದಾರರನ್ನು ನಿಲ್ಲಿಸುವುದು. ಫೋರಮ್ ಫಿಝಾ ಮಾಲ್‌ನಲ್ಲಿ ನಾವು ನಿರಂತರವಾಗಿ ಒಂದು ಕಿಯಾಸ್ಕ್ ಅನ್ನು ಗ್ರೌಂಡ್ ಮಟ್ಟದಲ್ಲಿ ಇರಿಸುವ ಮೂಲಕ ಮಾಲ್‌ನ ಸಂದರ್ಶಕರನ್ನು ಮಾತನಾಡಿಸಿ ಅವರಿಗೆ ತ್ಯಾಜ್ಯವನ್ನು ವಿಂಗಡಿಸುವ ಬಗ್ಗೆ ಅವರಿಗೆ ಸೂಕ್ತವಾದ ತರಬೇತಿಯನ್ನು ನೀಡಲಾಗುತ್ತದೆ.







# ನಮ್ಮ ಆಂದೋಲನ

ANTI POLLUTION DRIVE
APD FOUNDATION

## ಕೇಸ್ ಸ್ಟಡಿಯ ದಾಖಲಾತಿಕರಣ



ಇತರೆ ನಗರಗಳಲ್ಲಿನ ಕೇಸ್ ಸ್ಟಡಿಯ ಪ್ರಕಾರ ಅಲ್ಲಿನ ಉತ್ತಮ ರೂಢಿಗಳ ಕುರಿತು ಗಮನ ಹರಿಸಲು ಮತ್ತು ಅರ್ಥಮಾಡಿಕೊಳ್ಳಲು, ಎಪಿಡಿ ಫೌಂಡೇಶನ್ ಅವುಗಳನ್ನು ಬಹು ವಿಧಗಳಲ್ಲಿ ದಾಖಲಿಸಿಕೊಳ್ಳುತ್ತದೆ. ಮೊದಲ ದಾಖಲಾತಿ ಯಾವುದೆಂದರೆ ಬೆಂಗಳೂರಿನ 111ನೇ ವಾರ್ಡ್‌ನಲ್ಲಿ ಇರುವ ಒಣ ತ್ಯಾಜ್ಯ ಸಂಗ್ರಹ ಕೇಂದ್ರವನ್ನು ಭೇಟಿ ಮಾಡಿರುವುದಾಗಿತ್ತು. ವೀಡಿಯೋದಲ್ಲಿ, ಪಡೆದುಕೊಳ್ಳಬಹುದಾದ ಒಣ ತ್ಯಾಜ್ಯದ ಬಹು ವಿಧಗಳ ವಿವರಣೆಯನ್ನು ಮತ್ತು ಮಾರುಕಟ್ಟೆಂಯಲ್ಲಿ ಅವುಗಳ ಅನುಕ್ರಮ ಮೌಲ್ಯವನ್ನು ತ್ಯಾಜ್ಯ ವಿಂಗಡಣೆಕಾರ ನೀಡುತ್ತಿದ್ದಾರೆ.

## ಒಮ್ಮತ ನಿರ್ಮಾಣ ಮಾಡುವುದು

ಈ ಐಇಸಿ ಆಂದೋಲನವನ್ನು ಜಾರಿಗೊಳಿಸಿದ ನಂತರ ನಾವು ಹಲವಾರು ಪಾಲುದಾರಿಕೆಗಳ ಸಂವಹನವನ್ನು ಮತ್ತು ಬೆಳವಣಿಗೆಯನ್ನು ನಡೆಸಿದ್ದೇವೆ. ಮುಖಂಡರುಗಳಿಗೆ ಗುಂಪು ಸಭೆಗಳನ್ನು ನಡೆಸುವುದು, ತಂಡವನ್ನು ಅಭಿವೃದ್ಧಿಪಡಿಸುವುದು, ಕಾರ್ಪೊರೇಟರ್‌ಗಳಿಗೆ ಉಡುಗೊರೆ ನೀಡುವುದು, ಮುಖಂಡರನ್ನು ಗುರುತಿಸುವುದು ಇತ್ಯಾದಿಗಳನ್ನು ನಡೆಸಲಾಯಿತು. ಈ ಕೆಳಕಂಡ ಸಭೆಯನ್ನು ತಿಂಗಳ ಅವಧಿಂಯಲ್ಲಿ ನಡೆಸಲಾಗಿದೆ.



# ನಮ್ಮ ಆಂದೋಲನ

ANTI POLLUTION DRIVE
APD FOUNDATION

## ಅಡ್ವೋಕಸಿ ಮತ್ತು ಬೆಂಬಲ





ಈ ಆಂದೋಲನವನ್ನು ಇನ್ನಷ್ಟು ಬೆಂಬಲಿಸಲು ಮತ್ತು ಜನರನ್ನು ಉತ್ತೇಜಿಸಲು ನಾವು ಸಾರ್ವಜನಿಕ ಅಧಿಕಾರಿಗಳು ಮತ್ತು ಸೆಲೆಬ್ರಿಟಿಗಳಿಂದ ಶಬ್ದ/ವಿಡಿಯೋ ತುಣುಕುಗಳನ್ನು ಒಂದು ಗೂಡಿಸುತ್ತಿದ್ದೇವೆ. ಈ ಸಾರ್ವಜನಿಕ ಪ್ರತಿನಿಧಿಗಳು ಕೂಡ ತಮ್ಮ ಅನುಭವವನ್ನು ಮತ್ತು ಸಾರ್ವಜನಿಕರ ಪಾಲುದಾರಿಕೆ ಮತ್ತು ವರ್ತನೆಯಲ್ಲಿನ ಕುರಿತಾದ ತಮ್ಮ ಅನುಭವವನ್ನು ಕೂಡ ಹಂಚಿಕೊಳ್ಳುತ್ತಾರೆ.

## ವಿಡಿಯೋ ರಚನೆ

ತ್ಯಾಜ್ಯ ನಿರ್ವಹಣೆಯ ಮೇಲೆ ಸಂದೇಶವನ್ನು ಅತ್ಯಂತ ಪ್ರಬಲವಾಗಿರುವ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಪಡಿಸಲು ನಾವು ಸಾಕಷ್ಟು ವಿಡಿಯೋಗಳನ್ನು ಸಿದ್ಧಪಡಿಸಿದ್ದೇವೆ. ಸಮರ್ಪಕವಾದ ತ್ಯಾಜ್ಯ ನಿರ್ವಹಣೆಯ ಮೇಲೆ ಇರುವ ಸಂದೇಶವನ್ನು ನಾವು ಪ್ರಸ್ತುತಪಡಿಸಿದ್ದೇವೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ, ಮಾಲ್‌ಗಳಲ್ಲಿ ಪ್ಲೇ ಮಾಡಲಾಗುತ್ತಿದೆ ಮತ್ತು ವಾಟ್ಸ್ ಆಪ್ ಗ್ರೂಪ್‌ಗಳಲ್ಲಿ ಪ್ರಸರಣ ಮಾಡಲಾಗುತ್ತಿದೆ, ಇದರ ಜೊತೆಯಲ್ಲಿ ಮಂಗಳೂರಿನಲ್ಲಿ ಸಾರ್ವಜನಿಕರು ಒಂದುಗೂಡುವ ಸ್ಥಳಗಳಲ್ಲಿ ಕೂಡ ವಿಡಿಯೋವನ್ನು ಪ್ಲೇ ಮಾಡಲಾಗುತ್ತಿದೆ.







# ನಮ್ಮ ಆಂದೋಲನ

ANTI POLLUTION DRIVE
APD FOUNDATION

## ಸಂಗೀತದ ಮೂಲಕ ಅರಿವು:









ನಾವು ಒಂದು ಬ್ಯಾಂಡಿನೊಂದಿಗೆ ಪಾಲುದಾರಿಕೆಯನ್ನು ಮಾಡಿಕೊಂಡಿದ್ದೇವೆ ಈ ಬ್ಯಾಂಡ್ ನಗರದಲ್ಲಿ ತ್ಯಾಜ್ಯ ನಿರ್ವಹಣೆಯ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಲು ಜಾರ್ಝ್ ಮತ್ತು ರಾಕ್ ಬ್ಲೂಸ್ ಮೂಲಕ ಅತ್ಯಂತ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಸಾಮಾಜಿಕ ಬದಲಾವಣೆಗೆ ಸಂಗೀತವೇ ಪ್ರಬಲವಾದ ಅಸ್ತ್ರವಾಗಿದೆ ಮತ್ತು ಪರಿಣಾಮವನ್ನು ಗುರುತಿಸಬಹುದಾಗಿದೆ ಎಂದು ಬ್ಯಾಂಡ್ ಸದಸ್ಯರು ದೃಢವಾಗಿ ನಂಬಿದ್ದಾರೆ ಪಾಲುದಾರಿಕೆಯಲ್ಲಿ ಅವರ ಕೊಡುಗೆಯಾಗಿ, ಅವರು ಯುವಜನರು ಹೆಚ್ಚಿನ ಸಂಖ್ಯೆಂಯಲ್ಲಿ ಇರುವ ಸ್ಥಳಗಳಲ್ಲಿ ಸಂಗೀತ ಪ್ರದರ್ಶನದ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

## ಬಲೆ ತೆಲಿಪಾಲೆಯೊಂದಿಗೆ ಸಹಭಾಗಿತ್ವ



ಬಲೆ ತೆಲಿಪಾಲೆ ಒಂದು ತುಳು ಹಾಸ್ಯ ತಂಡವಾಗಿದ್ದು, ವಿಶ್ವದಾದ್ಯಂತ ಇರುವ ತುಳು ಭಾಷಿಗರ ಮನೆ ಮಾತಾಗಿದೆ, ಇದು ನಾಲ್ಕನೆಯ ಸೀಸನ್ ಅನ್ನು ಭರ್ಜರಿಯಾಗಿ ಪ್ರವೇಶ ಮಾಡಿದೆ. ಆದರೆ ಈ ಭಾರಿ ಸ್ವಲ್ಪ ವಿಭಿನ್ನವಾಗಿ ಮಾಡುತ್ತಿದೆ – ಅವರ ಹಾಸ್ಯವು ನಮ್ಮ ಸಾಮಾಜಿಕ ಸಂದೇಶವಾದ ತ್ಯಾಜ್ಯ ನಿರ್ವಹಣೆಯ ವಿಷಯಗಳಿಗೆ ತಳುಕುಹಾಕಿಕೊಂಡಿರುವುದು ಜೊತೆಯಲ್ಲಿ ಇಟ್ಟ ದೊಡ್ಡ ಹೆಜ್ಜೆಯಾಗಿದೆ. ಅವರು ತಮ್ಮ ಅತ್ಯಂತ ಹೆಚ್ಚಿನ ಟಿಆರ್‌ಪಿ ಇರುವ ಕಾಮಿಡಿ ಶೋ ಮೂಲಕ ತ್ಯಾಜ್ಯ ನಿರ್ವಹಣೆಯ ಮಹತ್ವವನ್ನು ಸಾರ್ವಜನಿಕರಿಗೆ ಅರಿವು ಮೂಡಿಸುವ ಮತ್ತು ಅರ್ಥಮಾಡಿಸುವ ವಿಚಾರದಲ್ಲಿ ನಮ್ಮೊಂದಿಗೆ ಕೈಗಳನ್ನು ಜೋಡಿಸಿದ್ದಾರೆ.

## ಪೌರ ಕಾರ್ಮಿಕರಿಗೆ ಆರೋಗ್ಯ ಕ್ಯಾಂಪ್:








ನಾವು ಅಂತರಾಷ್ಟ್ರೀಯ ಯೋಗ ದಿನಾಚರಣೆಯಂದು ಪೌರ ಕಾರ್ಮಿಕರಿಗಾಗಿ ಯೋಗ ಶಿಬಿರವನ್ನು ನಡೆಸಿರುತ್ತೇವೆ. ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಏನೆಂದರೆ ನಮ್ಮ ಪೌರ ಕಾರ್ಮಿಕರು ಸರಳವಾದ ಯೋಗ ತಂತ್ರಗಳ ಮೂಲಕ ತಮ್ಮ ಆರೋಗ್ಯ ಮತ್ತು ಸ್ವಚ್ಚತೆಯನ್ನು ಸುರಕ್ಷಿತವಾಗಿಸಿಕೊಳ್ಳಲು ಅರಿವನ್ನು ಮೂಡಿಸುವ ಪ್ರಯತ್ನವಾಗಿತ್ತು. ಪೌರ ಕಾರ್ಮಿಕರು ಯಾವಾಗಲೂ ಅಪಾಯಕಾರಿ ಪರಿಸ್ಥಿತಿಗಳು, ಅಪಾಯಕಾರಿ ವಸ್ತುಗಳು ಮತ್ತು ಮಾಲಿನ್ಯಕಾರಕಗಳೊಂದಿಗೆ ಹೋರಾಟ ನಡೆಸುತ್ತಿರುತ್ತಾರೆ.

## ಪ್ರಶಸ್ತಿ/ಗುರುತಿಸುವಿಕೆ



ಮುಂಬಯಿಯಲ್ಲಿ ನಡೆದ ಯುವ ಸಾಮಾಜಿಕ ಕಾರ್ಯಕರ್ತರ ಸಮಾವೇಶ 2016ರಲ್ಲಿ ಸ್ಮಾರ್ಟ್ ಸ್ವಚ್ಛ ಮಂಗಳೂರು (ಎಸ್‌ಎಸ್‌ಎಂ)ಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಎಸ್‌ಎಸ್‌ಎಂ ಎನ್ನುವುದು ಗುರಿಪಡಿಸಿದ ಆಂದೋಲನಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ಮೂಲದಲ್ಲೇ ತ್ಯಾಜ್ಯ ನಿರ್ವಹಣೆಯನ್ನು ಸಾಧಿಸಲು ಇರುವ ಕಾರ್ಯಕ್ರಮವಾಗಿದೆ. ಇದನ್ನು ಆಂತೋನಿ ವೇಸ್ಟ್ ಹ್ಯಾಂಡ್ಲಿಂಗ್ ಸೆಲ್ ಪ್ರೈವೇಟ್ ಲಿ.ಯೊಂದಿಗೆ ಎಪಿಡಿಯು ಸಂಘಟಿಸಿರುವ ಪ್ರಸ್ತುತ ಐಇಸಿ ಆಂದೋಲನದ ಜೊತೆಗೆ ಸಾಧಿಸಲಾಗಿದೆ.

# ಸಾಮಾಜಿಕ ಮಾಧ್ಯಮದ ಅರಿವು

ANTI POLLUTION DRIVE
APD FOUNDATION

ಇದು ನಮಗೆ ಮಂಗಳೂರಿನ ನಾಗರಿಕರೊಂದಿಗೆ ಸಂವಹನ ಮಾಡಲು, ವರ್ತಿಸಲು ಮತ್ತು ಸಂಪರ್ಕದಲ್ಲಿರಲು ನಮಗೆ ಸಹಾಯ ಮಾಡುವ ಅತ್ಯಂತ ಪ್ರಮುಖವಾದ ಸಾಧನ ಇದಾಗಿದೆ. ಸಂವಹನ ಮಾಡಲು ಹೊಸದಾದ ಆಯಾಮವೊಂದನ್ನು ಇಂಟರ್‌ನೆಟ್ ನಮಗೆ ಒದಗಿಸಿದೆ. ಮತ್ತು ಇದು ಜನರಿಗೆ ಮುಂದೆ ಬರಲು ಮತ್ತು ಸಮಾಜದಲ್ಲಿ ಸಾಮಾಜಿಕ ಹೆಜ್ಜೆಯಿಡುವಂತೆ ಮಾಡಲು ಸಶಕ್ತರನ್ನಾಗಿ ಮಾಡಿದೆ. ನಾವು **ಫೇಸ್‌ಬುಕ್, ಟ್ವೀಟರ್, ಇನ್‌ಸ್ಟಾಗ್ರಾಮ್ ಮತ್ತು ಸ್ನ್ಯಾಪ್‌ಚಾಟ್** ನಂತಹ ವೇದಿಕೆಗಳಲ್ಲಿ ಅತ್ಯಂತ ಪ್ರಬಲವಾದ ಸಾಮಾಜಿಕ ಮಾಧ್ಯಮಗಳ ಆಂದೋಲನವನ್ನು ಕೂಡ ನಡೆಸುತ್ತಿದ್ದೇವೆ. ನಮಗೆ ಈ ಸೌಲಭ್ಯಗಳು ಸಾವಿರಾರು ಜನರನ್ನು ತಲುಪಲು ಮತ್ತು ಪರಿಸರ ಸಂರಕ್ಷಣೆಯ ಮಹತ್ವದ ಬಗ್ಗೆ ಅವರಿಗೆ ಶಿಕ್ಷಣ ನೀಡಲು ಸಹಕಾರಿಯಾಗಿವೆ.

# ಶ್ಲಾಘನೀಯವಾದ ಪರಿಸರ ದಿನ

ANTI POLLUTION DRIVE
APD FOUNDATION



ಕರ್ನಾಟಕ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಯೋಗದಲ್ಲಿ 17-06-2017ರಂದು ವಿಶ್ವ ಪರಿಸರ ದಿನವನ್ನು ಆಚರಣೆ ಮಾಡಲಾಯಿತು. ಈ ದಿನ ನಾವು ಮಾಹಿತಿಯುಳ್ಳ ಚಾರ್ಟ್‌ಗಳನ್ನು ಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ಪರಿಚಯಿಸಿದೆವು.





02-10-2016ರಲ್ಲಿ ಮಂಗಳೂರು ನಗರ ಪಾಲಿಕೆಯೊಂದಿಗೆ ರೋಡ್ ಶೋ ಸಂಘಟಿಸುವ ಮೂಲಕ ಗಾಂಧೀ ಜಯಂತಿಯನ್ನು ಆಚರಿಸಲಾಯಿತು.







16-09-2016ರಂದು ಇಂಡಿಯನ್ ಕೋಸ್ಟಲ್ ಗಾರ್ಡ್ ಮತ್ತು ವಿವಿಧ ಶಾಲೆಗಳ ಮತ್ತು ಕಾಲೇಜುಗಳ ಸುಮಾರು 500 ವಿದ್ಯಾರ್ಥಿಗಳ ಸಹಯೋಗದಲ್ಲಿ ಪಣಂಬೂರು ಬೀಚ್‌ನಲ್ಲಿ ಅಂತರಾಷ್ಟ್ರೀಯ ಕರಾವಳಿ ಶುಚಿತ್ವದ ದಿವಸವನ್ನು ಆಚರಿಸಲಾಯಿತು.









25-03-2017 ಮತ್ತು 26-03-2017ರಂದು ಪಿಎ ಇಂಜಿನಿಯರಿಂಗ್ ಕಾಲೇಜಿನ 1000 ವಿದ್ಯಾರ್ಥಿಗಳೊಂದಿಗೆ ಮೆರವಣಿಗೆಯನ್ನು ಸಂಘಟಿಸಿ ಅರ್ಥ್ ಅವರ್ ಆಚರಿಸಲಾಯಿತು ಮತ್ತು ಫೋರಮ್ ಮಾಲ್‌ನಲ್ಲಿ ವಿವಿಧ ಅರಿವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

# ಇತರೆ ಪಾಲುದಾರರು

MANGALORE CITY CORPORATION

off

स्वच्छ भारत
एक कदम स्वच्छता की ओर

BHARATH bookmark
Your Book Store

CITY CENTRE
Mangalore's Largest Shopping and Entertainment Destination

FORUM
FIZA
HOME.WORK.FORUM

ANTONY WASTE
HANDLING CELL PVT LTD

sensinglocal
Architects + Urban Planners + Technologists

P·A·C·E
HIGHER EDUCATION
engineering future

FOLLOW TRAFFIC RULES SAVE YOUR FUTURE
MANGALURU CITY TRAFFIC POLICE

UN-HABITAT

KHAIN PROPERTIES

INDIA YOUTH FUND
An initiative of
UN-HABITAT | Narotam Sekhsaria Foundation

# ವಾರ್ತಾ ಪತ್ರಿಕೆಯ ಲೇಖನಗಳು






ಮುದ್ರಣ, ಆನ್‌ಲೈನ್ ಮತ್ತು ಟಿವಿ ಮಾಧ್ಯಮಗಳು ನಮ್ಮ ಎಲ್ಲಾ ಚಟುವಟಿಕೆಗಳಿಗೆ ಅತ್ಯುತ್ತಮವಾದ ಬೆಂಬಲವನ್ನು ಒದಗಿಸುತ್ತಿವೆ; ಇವು ಕಳೆದ ವರ್ಷದಲ್ಲಿ ನಾವು ಮಾಡಿರುವ ನಮ್ಮ ಚಟುವಟಿಕೆಗಳನ್ನು ಪ್ರಕಟಿಸಿರುವ ಕೆಲವು ಲೇಖನಗಳಾಗಿವೆ.



ANTI
POLLUTION
DRIVE

APD FOUNDATION


ಸಂಪರ್ಕ ವಿವರಗಳು

www.antipollution.org | info@antipollution.org

+91 824 4270008 | fb.com/antipollutiondrive | twitter.com/apd_foundation